ಬಂದವು. ಜೊತೆಗೆ, ಅವುಗಳನ್ನು ಅಭಿನಯಿಸುವ ಕಲಾವಿದರು ಕೂಡ ನನ್ನ ಮನಸ್ಸಿಗೆ ಬಂದರು. ಅಂದರೆ, ಪುರಾಣ ಮತ್ತು ವರ್ತಮಾನ ಒಟ್ಟಿಗೇನೆ ಒಂದು ವಿಚಿತ್ರವಾದ ಲಯದ ಜೊತೆಯಲ್ಲಿ ನನ್ನೊಳಗೆ ಇಳಿಯಿತು. ಪುರಾಣ ತನ್ನಷ್ಟಕ್ಕೆ ಪ್ರತ್ಯೇಕ ಅಲ್ಲ, ವರ್ತಮಾನ ತನ್ನಷ್ಟಕ್ಕೆ ಪ್ರತ್ಯೇಕ ಅಲ್ಲ ಎನ್ನುವ ಸಂಗತಿ ಚಿಕ್ಕ ವಯಸ್ಸಿನಲ್ಲಿ ಮನಸ್ಸಿಗೆ ಬಂತು.

ನಮ್ಮ ಪಕ್ಕದ ಮನೆಯಲ್ಲಿ ಮುದುಕರೊಬ್ಬರಿದ್ದರು. ಒಂಟಿಜೀವ. ಬೆಳಗಿನ ಜಾವ ಐದುಗಂಟೆಗೆ ಕುಮಾರವ್ಯಾಸ ಭಾರತ ಓದುತ್ತಿದ್ದರು. ನಾವಿನ್ನೂ ಹಾಸಿಗೆಯಲ್ಲಿರುವಾಗಲೇ ಕುಮಾರವ್ಯಾಸ ಭಾರತ ಕಿವಿಗೆ ಬೀಳುತ್ತಿತ್ತು. ಒಂದು ಕಡೆ ಯಕ್ಷಗಾನ, ಇನ್ನೊಂದು ಕಡೆ ಕುಮಾರವ್ಯಾಸ, ಸಾಯಂಕಾಲ ಆಯ್ತು ಅಂದ್ರೆ ಭಜನಾಮಂಡಳಿಯ ತತ್ವಪದಗಳು. ಅವರ ಮೂಲಕವೇ ತತ್ವಪದಕಾರರ ಪರಿಚಯವಾದುದು. ಸಾಹಿತ್ಯ ಅನ್ನುವಂತಹದ್ದು ಬದುಕಿನಾಚೆಯ ಪ್ರತ್ಯೇಕ ಕೋಣೆಯ, ಲೈಬ್ರರಿಯ ಅಥವಾ ಸೆಮಿನಾರಿನ ವಸ್ತುವಾಗಿರಲಿಲ್ಲ. ಅದು ಬದುಕಿನ ಅವಿಭಾಜ್ಯ ಅಂಗವಾಗಿತ್ತು.

ಬರಗಾಲ ಬಂದರೆ ಊರಿನಲ್ಲಿ ದೇವರಸೇವೆ ನಡೆಯುತ್ತಿತ್ತು. ಒಂದು ಕುತೂಹಲಕರ ಆಚರಣೆಯೆಂದರೆ, ಯಾವಾಗ ಮಳೆ ಬರಲ್ಲವೋ ಆಗ, ಊರಿನ ಬೇರೆಬೇರೆ ಮನೆಯವರೆಲ್ಲ ಸೇರಿ 'ಕಂತೆ ಭಿಕ್ಷೆ' ಎಂದು ಆಹಾರ ಸಂಗ್ರಹಿಸುತ್ತಿದ್ದರು. ಮಧ್ಯಾಹ್ನ ಒಂದುಕಡೆ ಎಲ್ಲೋ ಒಂದು ಮರದ ಕೆಳಗೆ ಸೇರಿ ಒಟ್ಟಿಗೆ 'ಕಂತೆ ಭಿಕ್ಷೆ'ಯ ಊಟ ಮಾಡ್ತಿದ್ದರು. ಅತ್ಯಂತ ಭೀಕರವಾದ ಬರಗಾಲದಲ್ಲೂ ಬಡವರಿಗೆ ಊಟಕ್ಕೆ ತೊಂದರೆಯಾಗಬಾರದು ಎನ್ನುವ ಉಪಾಯ ಕಂತೆಭಿಕ್ಷೆಯಲ್ಲಿತ್ತು. ಇಲ್ಲದವರಿಗೆ ಆತ್ಮಪ್ರಜ್ಞೆ, ವಿಶ್ವಾಸ ತಗ್ಗದಹಾಗೆ ಊಟ ಮಾಡಿಸುವ ಸುಂದರ ಉಪಾಯವದು. ನಮ್ಮದು ಅರೆ ಮಲೆನಾಡು. ಒಂದು ಕಡೆ ಸಹ್ಯಾದ್ರಿ, ಇನ್ನೊಂದು ಕಡೆ ಚೆನ್ನೂಲಾದ್ರಿ. ನಮ್ಮೂರಿಗೆ ಬಹಳ ಹತ್ತಿರ ಜೋಳದಾಳ್ ಫಾರೆಸ್ಟ್. ಊರಿನ ಪಕ್ಕದಲ್ಲೇ ಈಚಲ ಕಾಡಿತ್ತು. ಸೂರ್ಯನ ಪೂರ್ಣ ಬಿಸಿಲು ಇಲ್ಲವೇ ಇಲ್ಲ ಅಲ್ಲಿ. ಬಂಡಿಯಲ್ಲಿ ಹೋಗುವಾಗ ಗರಿಗಳು ಮೈಗೆಲ್ಲ ತಾಗುತ್ತಿದ್ದವು. ರೋಚಕವಾದ ಅನುಭವಗಳು ಅವೆಲ್ಲ. ಹೀಗೆ ಸಾಹಿತ್ಯ, ಸಂಸ್ಕೃತಿ, ಕಲೆಯ ವಾತಾವರಣದಲ್ಲಿ ನಾನು ಬೆಳೆದೆ.

◆ ಶಾಲೆಯ ಪರಿಸರ ಹೇಗಿತ್ತು? ನಿಮ್ಮ ಪಾಲಿಗೆ ಮನೆ ಕೂಡ ಶಾಲೆಯಂತೆಯೇ ಇತ್ತಲ್ಲವೇ?

ಮಿಡ್ಲ್‌ಸ್ಕೂಲೆಲ್ಲ ಊರಿನಲ್ಲೇ. ನಮ್ಮ ಮಿಡ್ಲ್‌ಸ್ಕೂಲ್ ಬಿಲ್ಡಿಂಗ್ ಒಂದುರೀತಿಯಲ್ಲಿ ಸರ್ವೋಪಯೋಗಿ ಕಟ್ಟಡ. ಯಾರ ಮನೆಯಲ್ಲಿ ಹಂಚು ಹೋದರೂ, ಸ್ಕೂಲಿನ ಕಟ್ಟಡದಿಂದ ಹಂಚು ತಂದು ಸರಿಪಡಿಸಿಕೊಳ್ಳೋರು. ಹಾಗಾಗಿ ನಮ್ಮ ಸ್ಕೂಲಿನಲ್ಲಿ ಎಲ್ಲೆಲ್ಲೂ ಆಕಾಶಕ್ಕೆ ಕಿಟಕಿಗಳು. ಪ್ರೈಮರಿಶಾಲೆಗೆ ಕಟ್ಟಡವೇ ಇರಲಿಲ್ಲ. ಸಾಹುಕಾರರ ಮನೆಯ ಪಾಗಾರದಲ್ಲೋ, ರಂಗನಾಥನ ಗುಡಿಯ ಅಂಗಳದಲ್ಲೋ ತರಗತಿಗಳು ನಡೆಯುತ್ತಿದ್ದವು.

ಮನೆಯಲ್ಲಿ ನಾನು ಒಬ್ಬನೇ ಮಗ. ನನ್ನ ತಾಯಿ, ಅವರ ಅಮ್ಮ ಹಾಗೂ ಅವರ ಅಕ್ಕ, ಮೂರು ಜನರ ಹೆಣ್ಣುಮಕ್ಕಳು ಹಾಗೂ ಅಜ್ಜ ಮನೆಯಲ್ಲಿ. ನನ್ನ ಕಂಡರೆ ಎಲ್ಲರಿಗೂ ಬಹಳ ಪ್ರೀತಿ. ಮಂಗಳಾರತಿ ತಗೊಂಡರೆ ಉಷ್ಣ, ತೀರ್ಥ ತಗೊಂಡರೆ ಶೀತ ಎನ್ನುವ ಮುಚ್ಚಟೆಯಲ್ಲಿ ನನ್ನನ್ನು ಬೆಳೆಸಿದರು. 'ಸ್ಕೂಲಿಗೆ ಹೋಗಬೇಡಮ್ಮ ನೀನು. ಮೇಷ್ಟ್ರು ಹೊಡೀತಾರೆ' ಎಂದು ಅಜ್ಜ ಮುದ್ದುಮಾಡುತ್ತಿದ್ದರು. ಅಮ್ಮ ಎಲ್.ಎಸ್. ಮಾಡಿದ್ದರು. ತಂದೆಯವರು ಇಂಟರ್‌ಮೀಡಿಯೆಟ್ ಮಾಡಿ, ತಾಲ್ಲೂಕು ಕಚೇರಿಯಲ್ಲಿ ಚನ್ನಗಿರಿಯಲ್ಲಿ ಕೆಲಸ ಮಾಡುತ್ತಿದ್ದರು. ಮದುವೆಯಾಗಿ ಮೂರು ವರ್ಷ ಇದ್ದರಷ್ಟೇ. ತೀರಿಕೊಂಡಾಗ ಅವರಿಗೆ ಇಪ್ಪತ್ತೆರಡು ಇಪ್ಪತ್ತಮೂರು ವಯಸ್ಸಿರಬೇಕು. ಅಮ್ಮನಿಗೆ ಹದಿನೆಂಟು ವರ್ಷ. ನಾನು ಹೈಸ್ಕೂಲು ಓದುವಾಗ ಅಜ್ಜ ಹೋಗಿಬಿಟ್ಟರು. ಹಾಗಾಗಿ ಬರೀ ಹೆಣ್ಣುಮಕ್ಕಳು ನನ್ನನ್ನು ಸಾಕಿದ್ದು ಅಮ್ಮ ಮತ್ತು ಇಬ್ಬರು ಅಜ್ಜಿಯರು. ಅವರ ಮೂಲಕ ಹೆಣ್ಣುಮಕ್ಕಳ ಸಂಕಟವೇನು